# ನೀತಿಬೋಧಕ ಸಾಹಿತ್ಯದ ಅಧ್ಯಯನದಲ್ಲಿ ಸಂಸ್ಕೃತ ಭಾಷೆಯ ಪ್ರಾಮುಖ್ಯತೆ

ಪ್ರಕಾಶ ಎನ್. ಹೆಗಡೆ

ಉಪನ್ಯಾಸಕರು, ಸಂಸ್ಕೃತ ವಿಭಾಗ, ಕರ್ನಾಟಕ ಕಲಾ ಕಾಲೇಜು, ಧಾರವಾಡ.

DOI: https://doi.org/10.5281/zenodo.17254840

## ABSTRACT:

ಸಂಸ್ಕೃತವು ಭಾರತದ ಪುರಾತನ ಮತ್ತು ಶಾಸ್ತ್ರೀಯ ಭಾಷೆಯಾಗಿದ್ದು, ಇದು ಭಾರತೀಯ ಸಾಹಿತ್ಯ, ತತ್ತ್ವಶಾಸ್ತ್ರ ಮತ್ತು ಧಾರ್ಮಿಕ ಗ್ರಂಥಗಳ ಮೂಲವಾಗಿದೆ. ಋಗ್ವೇದದಂತಹ ವಿಶ್ವದ ಮೊದಲ ಗ್ರಂಥಗಳು ಇದರಲ್ಲಿ ರಚಿಸಲ್ಪಟ್ಟಿವೆ. ವಿಜ್ಞಾನ, ಗಣಿತ, ವೈದ್ಯಕೀಯ ಮತ್ತು ಖಗೋಳಶಾಸ್ತ್ರ, ನೀತಿಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿನ ಭಾರತೀಯ ಪ್ರಗತಿಗೆ ಸಂಸ್ಕೃತವೇ ಅಡಿಪಾಯವಾಯಿತು. ಅಲ್ಲದೇ ಆಧುನಿಕ ಭಾರತೀಯ ಭಾಷೆಗಳ ಶಬ್ದಕೋಶಕ್ಕೆ ಸಂಸ್ಕೃತವು ಕೊಡುಗೆ ನೀಡಿದೆ.ಇದು ಇಂದಿಗೂ ಕೆಲವು ಧಾರ್ಮಿಕ ಆಚರಣೆಗಳಲ್ಲಿ ಮತ್ತು ಶೈಕ್ಷಣಿಕ ವಲಯಗಳಲ್ಲಿ ಬಳಕೆಯಲ್ಲಿದೆ. ಸಂಸ್ಕೃತವು ವೇದಗಳು, ಉಪನಿಷತ್ತುಗಳು, ಮಹಾಭಾರತ ಮತ್ತು ರಾಮಾಯಣದಂತಹ ಮಹಾಕಾವ್ಯಗಳ ರಚನೆಗೆ ಕಾರಣವಾಯಿತು. ಇದು ಭಾರತೀಯ ಜ್ಞಾನದ ಭಂಡಾರವಾಗಿದ್ದು, ಆಳವಾದ ಆಧ್ಯಾತ್ಮಿಕ ಮತ್ತು ಬೌದ್ಧಿಕ ಚಿಂತನೆಗಳಿಗೆ ಅಡಿಪಾಯ ಹಾಕಿದೆ. ಸಂಸ್ಕೃತವು ಗಣಿತ, ಖಗೋಳಶಾಸ್ತ್ರ (ಉದಾಹರಣೆಗೆ ಆರ್ಯಭಟನ ಆರ್ಯಭಟೀಯ) ಮತ್ತು ವೈದ್ಯಕೀಯ (ಉದಾಹರಣೆಗೆ ಸುಶ್ರುತ ಸಂಹಿತೆ) ಕ್ಷೇತ್ರಗಳಲ್ಲಿನ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಗೆ ಸಹಾಯ ಮಾಡಿತು. ಸಂಸ್ಕೃತವು ಹಲವಾರು ಭಾರತೀಯ ಭಾಷೆಗಳಿಗೆ ತಾಯಿಯೆಂದು ಪರಿಗಣಿಸಲಾಗಿದೆ. ಇದು ಇಂಗ್ಲಿಷ್ ಸೇರಿದಂತೆ ಅನೇಕ ಭಾಷೆಗಳ ಶಬ್ದಕೋಶಕ್ಕೆ ಪದಗಳನ್ನು ಒದಗಿಸಿದ್ದು ಹೊಸ ತಾಂತ್ರಿಕ ಪದಗಳನ್ನು ರೂಪುಗೊಳಿಸಲು ಸಹಾಯ ಮಾಡಿದೆ. ಸಂಸ್ಕೃತವು ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಅವಿಭಾಜ್ಯ ಅಂಗವಾಗಿದೆ. ಹಿಂದೂ ಧಾರ್ಮಿಕ ಆಚರಣೆಗಳಲ್ಲಿ ಮತ್ತು ಪೂಜಾ ವಿಧಾನಗಳಲ್ಲಿ ಇದು ಇಂದಿಗೂ ಬಳಕೆಯಲ್ಲಿದೆ. ಸಂಸ್ಕೃತವು ಕಡಿಮೆ ಪದಗಳಲ್ಲಿ ಹೆಚ್ಚು ಅರ್ಥಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುವುದರಿಂದ ವಿಶ್ವಮಾನ್ಯತೆ ಗಳಿಸಿದೆ.

## KEYWORDS:

ಸಾಹಿತ್ಯ, ನೀತಿಶಾಸ್ತ್ರ, ಶಬ್ದಕೋಶ, ಸಂಸ್ಕೃತಿ, ಸಂಹಿತೆ, ತತ್ತ್ವಶಾಸ್ತ್ರ, ನಾಗರಿಕತೆ.

"ಯದ್ಯಪಿ ಬಹುನಾಧೀಷೇ ತಥಾಪಿ ಪಠ ಪುತ್ರ ವ್ಯಾಕರಣಮ್ ।
ಸ್ವಜನಃ ಶ್ವಜನೋ ಮಾ ಭೂತ್ ಸಕಲಂ ಶಕಲಂ ಸಕೃತ್ ಶಕೃತ್"॥

ಇದರರ್ಥವಿಷ್ಟೇ, ವ್ಯಾಕರಣದ ಜ್ಞಾನವಿಲ್ಲದಿದ್ದರೆ ಶಬ್ದಗಳ ತಪ್ಪು ಉಚ್ಚಾರಣೆಯಾಗಿ ಬೇರೆಯೇ ಅರ್ಥ ಮೂಡಿಬರುವುದು. ಉದಾಹರಣೆಗೆ 'ಸ್ವಜನ' ಎಂದರ ಬದಲು 'ಶ್ವಜನ' ಎಂದು ಉಚ್ಛರಿಸಿದರೆ ಎಂಥ ಅರ್ಥ ವ್ಯತ್ಯಾಸವಾಗುತ್ತದೆ. 'ಸ್ವ' ಎಂದರೆ 'ತನ್ನ' ಎಂದು ಅರ್ಥ, 'ಶ್ವ' ಎಂದರೆ 'ನಾಯಿ' ಎಂದರ್ಥ. ಹಾಗೆಯೇ 'ಸಕಲ' 'ಶಕಲ'ಇವೆರಡರೊಳಗಿನ ಅರ್ಥ ವ್ಯತ್ಯಾಸ ಸಕಲ=ಎಲ್ಲ.ಶಕಲ=ತುಂಡು. ಹಾಗೆಯೇ ಸಕೃತ್ = ಒಂದುಸಲ.ಶಕೃತ್ = ಸೆಗಣಿ. ಆದುದರಿಂದ ತಂದೆ ಮಗನಿಗೆ ಹೀಗೆ ಉಪದೇಶನೀಡುತ್ತಿದ್ದಾನೆ. 'ಸ್ವಜನ' ಶಬ್ದವು 'ಶ್ವಜನ' ವಾಗದಿರಲು 'ಸಕಲ' ವು 'ಶಕಲ' ಮತ್ತು'ಸಕೃತ್' ಶಕೃತ್ ಆಗದಿರಲು ಅರ್ಥಾತ್ ಅಪಶಬ್ದ ಪ್ರಯೋಗವಾಗದಿರಲು ಮಗೂ, ಬಹಳಷ್ಟು ಕಲಿಯದಿದ್ದರೆ ವ್ಯಾಕರಣವನ್ನಾದರೂ ಕಲಿ ಎಂದು ಒಬ್ಬ ತಂದೆ ಮಗನಿಗೆ ಹೇಳುವಲ್ಲಿ ನಮಗೆ ವ್ಯಾಕರಣದ ಹಾಗೂ ಭಾಷೆಯ ಅಧ್ಯಯನದ ಮಹತ್ವ ಅರಿವಾಗುತ್ತದೆ. ನೀತಿಶಾಸ್ತ್ರ ಅಧ್ಯಯನಕ್ಕೆ ಸಂಸ್ಕೃತ ಭಾಷೆಯು ಅತಿ ಮುಖ್ಯವಾಗಿದೆ. ಏಕೆಂದರೆ ಇದು ಭಾರತೀಯ ಧರ್ಮ, ತತ್ತ್ವಶಾಸ್ತ್ರ, ನೀತಿಗಳು ಮತ್ತು ಸಾಂಸ್ಕೃತಿಕ ಆಳಕ್ಕೆ ಪ್ರವೇಶಿಸಲು ದ್ವಾರವಾಗಿದೆ. ವೇದಗಳು, ಉಪನಿಷತ್ತುಗಳು, ಮಹಾಭಾರತ ಮತ್ತು ರಾಮಾಯಣದಂತಹ ಮೂಲ ಗ್ರಂಥಗಳು ಸಂಸ್ಕೃತದಲ್ಲಿವೆ. ಇವುಗಳು ನೈತಿಕ ಬೋಧನೆಗಳು ಮತ್ತು ತಾತ್ವಿಕ ಆಲೋಚನೆಗಳನ್ನು ಒಳಗೊಂಡಿವೆ. ಸಂಸ್ಕೃತದ ಅಧ್ಯಯನವು ಈ ಗ್ರಂಥಗಳನ್ನು ನೇರವಾಗಿ ಅಧ್ಯಯನ ಮಾಡಲು, ಭಾರತೀಯ ಜ್ಞಾನದ ಆಳವನ್ನು ಅರ್ಥ ಮಾಡಿಕೊಳ್ಳಲು ಮತ್ತು ನೀತಿಶಾಸ್ತ್ರದ ಆಧಾರವಾಗಿರುವ ತತ್ವಗಳನ್ನು ಗ್ರಹಿಸಲು ಅನುವು ಮಾಡಿಕೊಡುತ್ತದೆ.

**ಸಂಸ್ಕೃತ ಭಾಷೆಯ ಮಹತ್ವ:** ಭಾರತೀಯ ಸಾಹಿತ್ಯ ಮತ್ತು ತತ್ತ್ವಶಾಸ್ತ್ರದ ಮೂಲ ಗ್ರಂಥಗಳು ಸಂಸ್ಕೃತದಲ್ಲಿ ರಚಿಸಲ್ಪಟ್ಟಿವೆ. ಇವುಗಳು ನೀತಿಶಾಸ್ತ್ರದ ಆಧಾರಸ್ತಂಭಗಳಾಗಿವೆ.

**ತಾತ್ವಿಕ ತಿಳುವಳಿಕೆ:** ಸಂಸ್ಕೃತ ಗ್ರಂಥಗಳು ಆಳವಾದ ಆಧ್ಯಾತ್ಮಿಕ ಮತ್ತು ತಾತ್ವಿಕ ಪ್ರಶ್ನೆಗಳನ್ನು ಅನ್ವೇಷಿಸುತ್ತವೆ. ಈ ಭಾಷೆಯ ಅಧ್ಯಯನವು ಈ ತತ್ತ್ವಶಾಸ್ತ್ರಗಳನ್ನು ಮತ್ತು ಅವುಗಳ ನೈತಿಕ ಬೋಧನೆಗಳನ್ನು ನೇರವಾಗಿ ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ.

**ಸಾಂಸ್ಕೃತಿಕ ಸಂಪರ್ಕ:** ಸಂಸ್ಕೃತವು ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯ ವಾಹಕವಾಗಿದೆ. ಇದರ ಅಧ್ಯಯನವು ನಮ್ಮ ಸಂಸ್ಕೃತಿಯ ಆಳವಾದ ತಿಳುವಳಿಕೆಯನ್ನು ಒದಗಿಸುತ್ತದೆ ಮತ್ತು ನಮ್ಮ ಸಂಸ್ಕೃತಿಯ ನಾಡಿ ಮಿಡಿತವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಸಂಸ್ಕೃತದ ಶುದ್ಧತೆ ಮತ್ತು ವ್ಯಾಕರಣದ

ಗಂಭೀರತೆಯು ವಿದ್ಯಾರ್ಥಿಗಳ ವಿಚಾರ ಶಕ್ತಿ, ಸೃಜನಶೀಲತೆ ಮತ್ತು ವಿಶ್ಲೇಷಣಾತ್ಮಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

**ಗ್ರಂಥಗಳ ವಿಶ್ಲೇಷಣೆ:** ನೀತಿಶತಕದಂತಹ ಶಾಸ್ತ್ರೀಯ ಸಂಸ್ಕೃತ ಕೃತಿಗಳನ್ನು ವಿಶ್ಲೇಷಿಸುವ ಮೂಲಕ ವಿದ್ಯಾರ್ಥಿಗಳು ಸಂಕೀರ್ಣ ಸಾಹಿತ್ಯಿಕ ಸೂಕ್ಷ್ಮಗಳನ್ನು ಗ್ರಹಿಸಲು ಮತ್ತು ಅವುಗಳ ತಾತ್ವಿಕ ಆಳವನ್ನು ಮೆಚ್ಚಲು ಕಲಿಯುತ್ತಿದ್ದಾರೆ. ಸಂಸ್ಕೃತವು ಭಾರತದ ಪ್ರಾಚೀನ ಮತ್ತು ಶಾಸ್ತ್ರೀಯ ಭಾಷೆಯಾಗಿದ್ದು, ಇದರಲ್ಲಿ ವಿಶ್ವದ ಮೊದಲ ಪುಸ್ತಕ ಋಗ್ವೇದವನ್ನು ಸಂಕಲಿಸಲಾಗಿದೆ. 6500 BC ಯಿಂದ 1500 BC ವರೆಗಿನ ವಿಭಿನ್ನ ವಿದ್ವಾಂಸರಿಂದ ವೇದಗಳನ್ನು ದಿನಾಂಕ ಮಾಡಲಾಗಿದೆ. ಸಂಸ್ಕೃತ ಭಾಷೆ ವೇದಗಳಿಗಿಂತ ಮುಂಚಿನದು. ಇದರಲ್ಲಿ ಅತ್ಯಂತ ಪುರಾತನ ದಾಖಲೆಗಳೆಂದರೆ ವೇದಗಳು. ಸಂಸ್ಕೃತ ವ್ಯಾಕರಣ ರಚನೆಯಲ್ಲಿ ಪಾಣಿನೀ ಮುನಿ, ಕಾತ್ಯಾಯನ ಮುಂತಾದವರು ಅಗ್ರಗಣ್ಯರಾಗಿದ್ದಾರೆ.

**ಸಂಸ್ಕೃತ ಭಾಷೆಯ ಇತಿಹಾಸ:**

ಸಂಸ್ಕೃತ ಭಾಷೆಯು, ದೇವರುಗಳು ಅಮರವಾಗಿರುವಂತೆಯೇ ತನ್ನ ಅಪಾರ ಸಾಹಿತ್ಯ, ಸಾರ್ವಜನಿಕ ಹಿತಾಸಕ್ತಿಯ ಮನೋಭಾವ, ವಿವಿಧ ಪ್ರಯತ್ನಗಳು ಮತ್ತು ಪೂರ್ವಪ್ರತ್ಯಯಗಳ ಮೂಲಕ ಹೊಸ ಪದಗಳನ್ನು ರಚಿಸುವ ಸಾಮರ್ಥ್ಯ ಇತ್ಯಾದಿಗಳಿಂದ ಅಮರವಾಗಿದೆ. ಸಂಸ್ಕೃತ ಭಾಷೆಯು ಐತಿಹಾಸಿಕ ಮತ್ತು ಸಮಕಾಲೀನ ಪ್ರಾಮುಖ್ಯತೆಯನ್ನು ಹೊಂದಿದೆ. ಸಾಂಸ್ಕೃತಿಕ ವಿಭಜನೆಗಳನ್ನು ನಿವಾರಿಸುತ್ತದೆ. ಶೈಕ್ಷಣಿಕ ಉತ್ಕೃಷ್ಟತೆಗೆ ಕೊಡುಗೆ ನೀಡುತ್ತದೆ. ಆಧ್ಯಾತ್ಮಿಕ ಯೋಗಕ್ಷೇಮವನ್ನು ಉತ್ತೇಜಿಸುತ್ತದೆ. ವೇದದ ಕಾಲದಿಂದ ಪಾಣಿನಿಯ ಕಾಲದವರೆಗೆ ಸಂಸ್ಕೃತವು ಆಡುಭಾಷೆಯೂ ಆಗಿತ್ತು. ಕತ್ತಿಯಿಂದ ಭಾರತ ಏನನ್ನು ಸಾಧಿಸಲಾಗಲಿಲ್ಲವೋ ಅದನ್ನು ಜ್ಞಾನದಿಂದ, ವಿದ್ಯೆಯಿಂದ ಸಾಧಿಸಿತು. ಈ ಜ್ಞಾನ ವಿದ್ಯೆಗಳನ್ನು ನಿರಂತರ ತನ್ನ ಒಡಲಾಳದಲ್ಲಿ ಧರಿಸಿ ಪೋಷಿಸಿಕೊಂಡು ಬರುತ್ತಿರುವ ಮಹಾಮಾತೆ ಸಂಸ್ಕೃತ ಭಾಷೆ. ಸಂಸ್ಕೃತ ಗ್ರಂಥಗಳೊಂದಿಗೆ ಕಾಣುವ ಭಾವದ ವೈವಿಧ್ಯತೆ, ಬೆಳೆಯುವ ಸಾಮರ್ಥ್ಯ, ಸಂಸ್ಕೃತ ಗ್ರಂಥಕರ್ತರ ವಿಚಾರದ ವಿಶಾಲತೆ, ಸಂಸ್ಕೃತ ಭಾಷೆಯ ವಿಚಾರಗಳು ಇಹಪರಗಳೆರಡಕ್ಕೂ ದಾರಿ ತೋರಿಸುವ ವ್ಯಾಪಕತೆಯಿಂದಲೇ ಅದರ ಮಹತ್ವವನ್ನು ಜಗತ್ತಿನಾದ್ಯಂತ ಪಸರಿಸುವಂತೆ ಮಾಡಿದೆ. ಸಂಸ್ಕೃತವನ್ನು ವಿಶ್ವದ ಪರಿಪೂರ್ಣ ಭಾಷೆ ಎಂದು ಪರಿಗಣಿಸಲಾಗಿದೆ. ಸಂಸ್ಕೃತ ನಮಗೆ ತಿಳಿದಿರುವ ಅತ್ಯಂತ ಹಳೆಯ ಭಾಷೆಗಳಲ್ಲಿ ಒಂದಾಗಿದೆ. ಇದು ಎಲ್ಲಕ್ಕಿಂತ ಹೆಚ್ಚು ವ್ಯವಸ್ಥಿತ ಮತ್ತು ತಾಂತ್ರಿಕ ಭಾಷೆ ಎಂದು ನಂಬಲಾಗಿದೆ. ಇದನ್ನು ಎಲ್ಲಾ ಭಾಷೆಗಳ ತಾಯಿ ಎಂದೂ ಕರೆಯಲಾಗುತ್ತದೆ ಮತ್ತು ಹಿಂದೂಗಳ ಪವಿತ್ರ

ಕಾರ್ಯಗಳು ಮತ್ತು ಸಮಾರಂಭಗಳಲ್ಲಿ ಸಂಸ್ಕೃತದ ಪ್ರಭಾವ ಸರ್ವವೇದ್ಯವೇ ಆಗಿದೆ. ಭಾರತದಲ್ಲಿ ಸಂಸ್ಕೃತ ಭಾಷೆ ಹೊಂದಿರುವ ಸ್ಥಾನವನ್ನು ಯುರೋಪಿನಲ್ಲಿ ಲ್ಯಾಟಿನ್ ಹಾಗೂ ಗ್ರೀಕ್ ಭಾಷೆಗಳು ಹೊಂದಿವೆ. ಇದು ಭಾರತದ ಅಧಿಕೃತ ಭಾಷೆಗಳಲ್ಲಿ ಒಂದು. ಪುರಾತನ ಭಾರತೀಯ ಸಂಸ್ಕೃತಿ, ಸಾಹಿತ್ಯ, ವಿಜ್ಞಾನ ಹಾಗೂ ತತ್ತ್ವಶಾಸ್ತ್ರಗಳಲ್ಲಿ ವಿಪುಲವಾಗಿ ಉಪಯೋಗಿಸಲ್ಪಟ್ಟಿರುವ ಭಾಷೆ ಇದಾಗಿದೆ.

ಶುಕ್ರಾಚಾರ್ಯರು ಹಿಂದೂ ಪುರಾಣಗಳಲ್ಲಿ ಅಸುರರ (ರಾಕ್ಷಸರ) ಗುರುವಾಗಿದ್ದು, ಸಪ್ತರ್ಷಿಗಳಲ್ಲಿ ಒಬ್ಬರಾಗಿದ್ದಾರೆ. ಅವರು ಶಿವನಿಂದ ಸಂಜೀವಿನಿ ವಿದ್ಯೆಯನ್ನು (ಮೃತರು ಬದುಕುವ ವಿದ್ಯೆ) ಪಡೆದುಕೊಂಡಿದ್ದರು. ಅಸುರರಿಗೆ ಜ್ಞಾನ ನೀಡಿದ ಇವರನ್ನು ಅಸುರಾಚಾರ್ಯ ಎಂದೂ ಕರೆಯಲಾಗುತ್ತದೆ. ಶುಕ್ರನೀತಿ, ಶುಕ್ರನೀತಿಸಾರ ಅಥವಾ ಶುಕ್ರಾಚಾರ್ಯರ ನೈತಿಕ ವ್ಯವಸ್ಥೆ ಎಂದೂ ಕರೆಯಲ್ಪಡುವ ಶುಕ್ರನೀತಿಯು ಧರ್ಮಶಾಸ್ತ್ರದ ಒಂದು ಭಾಗವಾಗಿದೆ. ಇದು ಸರ್ಕಾರದ ಕುರಿತಾದ ಒಂದು ಗ್ರಂಥವಾಗಿದ್ದು ನೈತಿಕತೆಯನ್ನು ಎತ್ತಿ ಹಿಡಿಯಲು ರಾಜಕೀಯ ಸಿದ್ಧಾಂತವನ್ನು ಹೇಗೆ ಬಳಸಬೇಕೆಂದು ಸೂಚಿಸುತ್ತದೆ. ಈ ಸಂಹಿತೆಯನ್ನು 'ಉಶಾನಸ್' ಎಂದೂ ಕರೆಯಲಾಗುತ್ತದೆ ಮತ್ತು ಇದನ್ನು ವೈದಿಕ ಕಾಲದಲ್ಲಿ ಬರೆಯಲಾಗಿದೆ ಎಂದು ಹೇಳಲಾಗಿದೆ.

'ನೀತಿ' ಎಂಬುದು ಸಂಸ್ಕೃತ ಪದವಾಗಿದೆ. 'ಶುಕ್ರನೀತಿಯು' ನೈತಿಕತೆಯನ್ನು ವಿವರಿಸಿದ್ದು, ಇದು ಜನರು ಮತ್ತು ರಾಜ್ಯದ ಅಥವಾ ದೇಶದ ಪ್ರಜೆಗಳ ಒಟ್ಟಾರೆ ಯೋಗಕ್ಷೇಮಕ್ಕೆ ಅತ್ಯಗತ್ಯ ಎಂದು ಹೇಳುತ್ತದೆ. ಹೀಗಾಗಿ ಆಡಳಿತಗಾರನು ಮಾನವ ಚಟುವಟಿಕೆಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಂಶಗಳನ್ನು ನಿಯಂತ್ರಿಸಬೇಕು. ಶುಕ್ರನೀತಿಯ ಪ್ರಕಾರ, ರಾಜನ ಮುಖ್ಯ ಜವಾಬ್ದಾರಿಗಳು, ತನ್ನ ಪ್ರಜೆಗಳ ರಕ್ಷಣೆ ಮತ್ತು ಅಪರಾಧಿಗಳಿಗೆ ಶಿಕ್ಷೆ ಆಗಿರಬೇಕು ಮತ್ತು ಅಂತಹ ಕ್ರಮಗಳನ್ನು ಮಾರ್ಗಸೂಚಿಯಿಲ್ಲದೆ (ನೀತಿ) ಜಾರಿಗೆ ತರಲು ಸಾಧ್ಯವಿಲ್ಲ. ಶುಕ್ರಾಚಾರ್ಯರ ಪ್ರಕಾರ ಒಬ್ಬ ವ್ಯಕ್ತಿಯು ವ್ಯಾಕರಣ, ತರ್ಕ ಮತ್ತು ವೇದಾಂತವಿಲ್ಲದೆ ಬದುಕಬಹುದು, ಆದರೆ ನೀತಿಯ ಅನುಪಸ್ಥಿತಿಯಲ್ಲಿ ಬದುಕಲು ಸಾಧ್ಯವಿಲ್ಲ ಮತ್ತು ಸಮಾಜದಲ್ಲಿ ಸಾಮಾಜಿಕ ಕ್ರಮವನ್ನು ಕಾಪಾಡಿಕೊಳ್ಳಲು ಅಗತ್ಯವಾದ ಅಂಶವೆಂದು ಶುಕ್ರಾಚಾರ್ಯರು ಅದನ್ನು ವಿವರಿಸುತ್ತಾರೆ.

ಮಹಾಭಾರತದ ಯುದ್ಧದ ಪೂರ್ವದಲ್ಲಿ ಧೃತರಾಷ್ಟ್ರನಿಗೆ ಸಂಜಯನು ಪಾಂಡವರ ಸಂದೇಶವನ್ನು ಹೇಳಿದ ನಂತರ, ವಿದುರರು ಧೃತರಾಷ್ಟ್ರನಿಗೆ ಅನೇಕ ನೀತಿಗಳನ್ನು ಹೇಳುತ್ತಾರೆ. ಈ ನೀತಿಗಳು ಜೀವನದ ಸವಾಲುಗಳನ್ನು ಎದುರಿಸಲು, ಸಮಾಜದಲ್ಲಿ ಉತ್ತಮ ಸ್ಥಾನ ಪಡೆಯಲು ಸಹಾಯ ಮಾಡುತ್ತವೆ.

'ವಿದುರ ನೀತಿ' ಎಂಬುದು ಮಹಾಭಾರತದ ಉದ್ಯೋಗ ಪರ್ವದಲ್ಲಿ ಮಹಾಮಂತ್ರಿ ವಿದುರರು ಕುರುರಾಜ ಧೃತರಾಷ್ಟ್ರನಿಗೆ ಹೇಳಿದ ನೀತಿಬೋಧನೆಗಳ ಸಂಗ್ರಹವಾಗಿದೆ. ಈ ನೀತಿಗಳು ಜೀವನ, ರಾಜಕೀಯ ಮತ್ತು ನೈತಿಕತೆಯನ್ನು ಕುರಿತಾದ ಆಳವಾದ ಒಳನೋಟಗಳನ್ನು ನೀಡುತ್ತವೆ. ಇದರಲ್ಲಿ ವ್ಯಕ್ತಿಯ ಸಮಗ್ರ ಅಭಿವೃದ್ಧಿ, ಸಾರ್ವಜನಿಕ ಕಲ್ಯಾಣ, ನ್ಯಾಯ ಮತ್ತು ಧರ್ಮದ ಪ್ರಾಮುಖ್ಯತೆಯನ್ನು ಬೋಧಿಸಲಾಗಿದೆ.

'ಪಂಚತಂತ್ರ, ಹಿತೋಪದೇಶ' ಹಾಗೂ 'ವೇತಾಲ ಪಂಚವಿಂಶತಿಯ' ಕಥೆಗಳು ಪ್ರಾಣಿ, ಪಕ್ಷಿಗಳ ಪಾತ್ರಗಳನ್ನು ಬಳಸಿ ರಾಜನೀತಿ, ನೈತಿಕ ಶಿಕ್ಷಣ ಮತ್ತು ಮಾನವ ನಡುವಳಿಕೆಯ ಕುರಿತು ಪಾಠಗಳನ್ನು ಹೇಳುತ್ತವೆ. ಇದರಲ್ಲಿ ಮಿತ್ರರೊಂದಿಗಿನ ಸಂಬಂಧಗಳು, ಶತ್ರುಗಳೊಂದಿಗೆ ವ್ಯವಹರಿಸುವ ತಂತ್ರಗಳು, ಯುದ್ಧ ಮತ್ತು ಶಾಂತಿಯ ತತ್ವಗಳು, ಹಾಗೂ ಸಮಾಜದಲ್ಲಿ ಮೋಸಗಾರರನ್ನು ಎದುರಿಸುವ ರೀತಿಗಳನ್ನು ವಿವರಿಸಲಾಗಿದೆ. ಪಂಚತಂತ್ರದ ಪ್ರತಿಯೊಂದು ಕಥೆಯೂ ಐದು ತತ್ವಗಳಾದ ಮಿತ್ರಭೇದ, ಮಿತ್ರಲಾಭ, ಲಬ್ಧಪ್ರಣಾಶ, ಅಪರೀಕ್ಷಿತಕಾರಕ, ಕಾಕೋಲೂಕೀಯ ಈ ತಂತ್ರಗಳಲ್ಲಿ ಎಲ್ಲಾ ಪ್ರಕಾರದ ನೀತಿಯನ್ನು ಬೋಧಿಸುತ್ತವೆ.

**ಪಂಚತಂತ್ರದಲ್ಲಿ ರಾಜನೀತಿಯ ಪ್ರಮುಖ ವಿಚಾರಗಳು:**

**ಮಿತ್ರರೊಂದಿಗೆ ಬಾಂಧವ್ಯ:** ಗೆಳೆಯರನ್ನು ಕಳೆದುಕೊಳ್ಳುವುದನ್ನು (ಮಿತ್ರಭೇದ) ಮತ್ತು ಹೊಸ ಗೆಳೆಯರನ್ನು ಗಳಿಸುವುದನ್ನು (ಮಿತ್ರಲಾಭ) ವಿವರಿಸುತ್ತದೆ. ಉತ್ತಮ ಗೆಳೆತನವನ್ನು ಕಾಪಾಡಿಕೊಳ್ಳುವುದು ಜೀವನದ ಅವಿಭಾಜ್ಯ ಅಂಗ ಎಂದು ತಿಳಿಸುತ್ತದೆ.

**ಶತ್ರುಗಳೊಂದಿಗೆ ವ್ಯವಹಾರ:** ಬಲಿಷ್ಠ ಶತ್ರುಗಳನ್ನು ಎದುರಿಸಲು ನಮ್ರತೆ ಮತ್ತು ತಾಳ್ಮೆ (ವೇತಸ ವೃತ್ತಿ ) ಮುಖ್ಯ ಎಂಬುದನ್ನು ಹೇಳುತ್ತದೆ. ಕೇವಲ ಬಲದಿಂದ ಎದುರಿಸುವ ಬದಲು ಬುದ್ಧಿವಂತಿಕೆಯಿಂದ, ಸೂಕ್ತ ಸಮಯದಲ್ಲಿ ಪ್ರತಿಕ್ರಿಯಿಸಬೇಕು ಎಂದು ಕಥೆಗಳು ಸಾರುತ್ತವೆ.

**ಯುದ್ಧ ಮತ್ತು ಶಾಂತಿ:** ಯುದ್ಧವನ್ನು, ಭೂಮಿ, ಮೈತ್ರಿ ಮತ್ತು ಧನ ಸಿಗದಿದ್ದರೆ ಮಾಡಬಾರದು ಎಂದು ಹೇಳುತ್ತದೆ. ಯುದ್ಧದ ಫಲಿತಾಂಶಗಳು ಅನಿಶ್ಚಿತವಾಗಿರುವುದರಿಂದ ಆತುರದಲ್ಲಿ ಯುದ್ಧಕ್ಕೆ ಇಳಿಯುವುದಕ್ಕಿಂತ ಸಾಮೋಪಾಯದಿಂದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಬೇಕು.

**ತಂತ್ರ ಮತ್ತು ಕಪಟತನ:** ಕೆಲವೊಮ್ಮೆ ಗುರಿಯನ್ನು ತಲುಪಲು ತಂತ್ರಗಳನ್ನು, ಬುದ್ಧಿಶಕ್ತಿಯನ್ನು ಮತ್ತು ಕಪಟತನವನ್ನು ಬಳಸಬೇಕಾಗುತ್ತದೆ. ಸಮಾಜದಲ್ಲಿ ಎಲ್ಲರೂ ಒಳ್ಳೆಯವರಾಗಿರುವುದಿಲ್ಲ. ಆದ್ದರಿಂದ ಧೂರ್ತರನ್ನು ಎದುರಿಸಲು ಅವರ ಕಪಟ

ಮಾರ್ಗಗಳ ಅರಿವು ಇರಬೇಕು ಎಂದು ಹೇಳುತ್ತದೆ.

**ನೈತಿಕತೆ ಮತ್ತು ಧರ್ಮ:** ಒಳ್ಳೆಯತನ ಮತ್ತು ಧರ್ಮವನ್ನು ಎತ್ತಿ ಹಿಡಿಯಲು ಕೆಲವು ಸಂದರ್ಭಗಳಲ್ಲಿ ಕಠಿಣ ತಂತ್ರಗಳನ್ನು ಬಳಸಬೇಕಾಗುತ್ತದೆ. ಸಮಯ ಮತ್ತು ಸಂದರ್ಭಕ್ಕೆ ತಕ್ಕಂತೆ ಉತ್ತಮ ಕಾರ್ಯಗಳನ್ನು ಸಾಧಿಸಲು ಸಿದ್ಧವಿರಬೇಕು. ಪ್ರಾಣಿಗಳ ಶಾರೀರಿಕ ಶಕ್ತಿಗಿಂತ ಮಾನಸಿಕ ದೃಢತೆ, ಧೈರ್ಯ ಮತ್ತು ಮೋಸಮಾಡದೇ ಇರುವುದು ಶ್ರೇಷ್ಠ ಎಂದು ಪಂಚತಂತ್ರ ವಿವರಿಸುತ್ತದೆ.

**ಉಪಸಂಹಾರ:**

ಯಾವುದೇ ಕಾವ್ಯಗಳಾಗಲಿ, ಶಾಸ್ತ್ರ ಗ್ರಂಥಗಳಾಗಲಿ ಅವುಗಳನ್ನು ಮೂಲಭಾಷೆಯಲ್ಲಿಯೇ ಓದಿ ಅರ್ಥೈಸಿಕೊಂಡಲ್ಲಿ ಕವಿಗಳ ಅಥವಾ ಶಾಸ್ತ್ರಕಾರರ ಮೂಲ ಉದ್ದೇಶ ಸಾರ್ಥಕವಾಗುತ್ತದೆಂಬುದು ನಿರ್ವಿವಾದ. ಅನ್ಯ ಭಾಷೆಗಳು ಅಥವಾ ಭಾಷಾಂತರಗೊಂಡ ರೂಪದ ಅಧ್ಯಯನದಲ್ಲಿ ಲೋಪದೋಷಗಳು ಸರ್ವೇಸಾಮಾನ್ಯ. ಈ ದೃಷ್ಟಿಯಿಂದಲೂ ಭಾರತದ ಬಹುತೇಕ ಭಾಷೆಗಳು ಹಾಗೂ ಶಾಸ್ತ್ರಗಳಿಗೆ ಸಂಸ್ಕೃತ ಭಾಷೆಯೇ ಮೂಲಾಧಾರವಾಗಿರುವುದರಿಂದಲೂ ಎಲ್ಲಾ ನೀತಿಶಾಸ್ತ್ರಗಳ ಅಧ್ಯಯನಕ್ಕೆ ಸಂಸ್ಕೃತ ಭಾಷೆಯ ಜ್ಞಾನ ಅನಿವಾರ್ಯವಾಗಿದೆ ಎಂದರೆ ಖಂಡಿತವಾಗಿ ಅತಿಶಯೋಕ್ತಿಯಾಗಲಾರದು.

**ಪರಾಮರ್ಶನ ಗ್ರಂಥಗಳು:**


1. ಬಿನೋಯ್ ಕುಮಾರ್ ಸರ್ಕಾರ್, (1975), ಶುಕ್ರನೀತಿ, ಮುನ್ಶಿರಾಂ ಮನೋಹರಲಾಲ್ ಪಬ್ಲಿಷರ್ಸ್, ನವದೆಹಲಿ.
2. ಗಜೇಶ್ವರ ಚೌಧರಿ, (2024), ವಿದುರ ನೀತಿ, ಚೌಖಂಬಾ ಕೃಷ್ಣದಾಸ ಅಕಾಡೆಮಿ, ವಾರಾಣಸಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.